# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ 34/2025

**ಪಿ.ಡಬ್ಲ್ಯೂಃ 9(ಸಿಡಬ್ಲ್ಯೂಃ11 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ವೀರೇಶ** |
| **ತಂದೆಯ ಹೆಸರು** | : | **ಚಾಗಪ್ಪ** |
| **ವಯಸ್ಸು** | : | **26 ವರ್ಷ** |
| **ಕೆಲಸ** | : | **ಕೂಲಿ ಕೆಲಸ** |
| **ವಾಸ ಸ್ಥಳ** | : | **ಕುರುವಳ್ಳಿ ಗ್ರಾಮ** |

**ಸಾಕ್ಷಿಯನ್ನು ದಿನಾಂಕ 11.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಪ್ರಾಸಾ.2 ಮೂಕಮ್ಮ ನನ್ನ ತಾಯಿ. ಚಾಸ-.10 ಚಾಗಪ್ಪ ನನ್ನ ತಂದೆ. ಚಾಸಾ.12 ಕವಿತಾ ನನ್ನ ತಂಗಿ. ಉಮೇಶ ನನ್ನ ಚಿಕ್ಕಪ್ಪನ ಮಗ.

2. ಈಗೆ 1 ವರ್ಷಗಳ ಹಿಂದೆ ನಾನು ಮತ್ತು ನನ್ನ ತಂಗಿ ನಮ್ಮ ಸಂಬಂಧಿಕರ ಮನೆ ಹಳೇಕೋಟೆಗೆ ಹೋಗಿದ್ದೆವು. ನನ್ನ ತಂದೆ ಮೆಣಸಿನ ಕಾಯಿ ಮಾರಲು ಬ್ಯಾಡಗಿಗೆ ಹೋಗಿದ್ದನು. ನನ್ನ ಸಹೋದರ ಸಂಬಂಧಿ ಉಮೇಶ ನನಗೆ ಫೋನ್ ಮಾಡಿ ಆರೋಪಿ ಶೇಖರ್ ನನ್ನ ತಾಯಿಯ ಮೇಲೆ ಗಲಾಟೆ ಮಾಡಿದ್ದಾನೆ ಎಂದು ತಿಳಿಸಿದನು.

**S.C.No.34/2025**
**P.W. 9 (C.W.11 )**
**Date : 11.02.2026**

**3.** ನಾನು ಮತ್ತು ನನ್ನ ತಂಗಿ ಸಿರುಗುಪ್ಪ ಆಸ್ಪತ್ರೆಗೆ ಹೋಗಿರುತ್ತೇವೆ. ನನ್ನ ತಾಯಿಯ ಎಡ ಕೈ ಮುಂಗೈ , ಬೆರಳುಗಳು, ಎಡ ಭುಜ , ಎಡ ಕಣ್ಣು, ಉಬ್ಬು ಮತ್ತು ಮೊಣ ಕೈ ಗಳಿಗೆ ರಕ್ತಗಾಯಗಳು ಆಗಿತ್ತು. ಮುಂಗೈ ಮುರಿದಿತ್ತು. ಹೇಗೆ ಪೆಟ್ಟಾಗಿದೆ ಎಂದು ನಾನು ನನ್ನ ತಾಯಿಯನ್ನು ಕೇಳಿದಾಗ ಆರೋಪಿ ಶೇಖರ್ ಈಳಿಗೆ ಮಣೆಯಿಂದ ತನಗೆ ಹೊಡೆದಿರುವುದಾಗಿ ತಿಳಿಸಿದರು. ನನ್ನ ತಾಯಿ ಸಿರುಗುಪ್ಪ ಆಸ್ಪತ್ರೆಯಲ್ಲಿ ಒಂದು ದಿನ ಇದ್ದಳು. ಮರುದಿನ ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನನ್ನ ತಾಯಿ ಬಳ್ಳಾರಿಯ ಆಸ್ಪತ್ರೆಯಲ್ಲಿಒಂದು ತಿಂಗಳು ಒಳ ರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ. ನಾನು ನನ್ನ ತಾಯಿಯೊಂದಿಗೆ ಆಸ್ಪತ್ರೆಯಲ್ಲಿ ಇದ್ದೆನು. ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ.

**ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಹೆಚ್.ಆರ್.ಜೆಃ(ಎಲ್ ಎ ಡಿಸಿ) ವಕೀಲರಿಂದ:**

**4.** ನನ್ನ ತಾಯಿಯನ್ನು ಮನೆಯಲ್ಲಿ ಬಿಟ್ಟು ನಾವು ಬಹಳ ಸಲ ನಮ್ಮ ಸಂಬಂಧಿಕರ ಮನೆಗೆ ಹೋಗಿ ಬರುತ್ತೇವೆ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಇರುವ ನನ್ನ ಸಂಬಂಧಿಕರು ಸುರಕ್ಷಿತವಾಗಿ ಇದ್ದಾರೆ. ನನ್ನ ತಾಯಿ ಸುರಕ್ಷಿತಳಾಗಿ ಇರುತ್ತಾಳೆ ಎಂಬ ಕಾರಣಕ್ಕಾಗಿ ನಾವು ಆಕೆಯನ್ನು ಮನೆಯಲ್ಲಿ ಬಿಟ್ಟು ಸಂಬಂಧಿಕರ ಮನೆಗೆ ಹೋಗುತ್ತೇವೆ ಎನ್ನುವುದು ಸರಿಯಲ್ಲ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಅವಶ್ಯಕತೆ ಇದ್ದಾಗ ಮನೆಯಿಂದ ಹೋಗುತ್ತೇವೆ.

**5.** ಉಮೇಶ್ ರವರು ನನಗೆ ತಿಳಿಸಿದಾಗ ರಾತ್ರಿ 10.30 ಗಂಟೆ ಆಗಿರಬಹುದು. ರಾತ್ರಿ 10.30 ಗಂಟೆಗೆ ಕರೆ ಮಾಡಿದ ನಂತರ ಸುಮಾರು 10-15 ನಿಮಿಷಗಳಲ್ಲಿ ನಾವು

ಹೋಗಿರುತ್ತೇವೆ. ನನ್ನ ತಾಯಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ದಿಃ28.2.2025 ರಂದು ಸಿರುಗುಪ್ಪ ಆಸ್ಪತ್ರೆಯಿಂದ ಬಳ್ಳಾರಿಯ ಒಪಿಡಿಗೆ ನನ್ನ ತಾಯಿಯನ್ನು ಕರೆದುಕೊಂಡು ಹೋಗಿದ್ದೇವೆ. ವಿಮ್ಸ ಆಸ್ಪತ್ರೆಗೆ ಪೊಲೀಸರು ಬಂದಿದ್ದರು. ನನ್ನ ತಾಯಿ ಫಿರ್ಯಾದು ಕೊಟ್ಟಿದ್ದಾರೆ. ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

-

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**